RNU AIR DHARWAD

MAY 10, 2025

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಆಪರೇಷನ್ ಸಿಂಧೂರ್: ರಾಜ್ಯದ** ಜನತೆಯ ಸುರಕ್ಷತೆಗೆ ಸೂಕ್ತ ಭದ್ರತೆ ಖಾತ್ರಿ ಪಡಿಸುವಂತೆ, ಕೇಂದ್ರ ಗೃಹ ಸಚಿವಾಲಯದಿಂದ, ಆದೇಶ.
- **ಮೈಸೂರು ಆಡಳಿತ ತರಬೇತಿ ಸಂಸ್ಥೆ:** ದೇಶದ ಹಲವು ರಾಜ್ಯಗಳ ಅಧಿಕಾರಿಗಳಿಗೆ, ಮಾದರಿ ತರಬೇತಿ ಕೇಂದ್ರ.
- **ಪಶ್ಚಿಮ ಘಟ್ಟದ ಸೊಪ್ಪಿನ ಬೆಟ್ಟಗಳ,** ಸುಸ್ಥಿರ ಅಭಿವೃದ್ಧಿಗೆ, ಮಲೆನಾಡಿನ ರೈತರ ಸಮಾಲೋಚನಾ ಸಭೆ, ತೀರ್ಮಾನ.
- **ಉಳ್ಳಾಲ ಕಡಲ್ಕೊರೆತ ಸಮಸ್ಯೆ:** ಶಾಶ್ವತ ಪರಿಹಾರಕ್ಕೆ, 70 ಕೋಟಿ ರೂಪಾಯಿ ಯೋಜನೆ.

<><><>

**ಆಪರೇಷನ್ ಸಿಂಧೂರ್ ಕಾರ್ಯಾಚರಣೆ ಹಿನ್ನೆಲೆ,** ರಾಜ್ಯದ ಜನರ ಸುರಕ್ಷತೆಗಾಗಿ ಎಲ್ಲ ರೀತಿಯ ಕ್ರಮ ಕೈಗೊಳ್ಳುವಂತೆ, ಕೇಂದ್ರ ಗೃಹ ಸಚಿವಾಲಯ, ರಾಜ್ಯ ಸರ್ಕಾರಗಳಿಗೆ ಪತ್ರ ಬರೆದಿದೆ. ಯಾವುದೇ ವಿಪತ್ತಿನ ಸಂದರ್ಭ ಎದುರಾದರೂ, ಅದನ್ನು ಸಮರ್ಥವಾಗಿ ನಿಭಾಯಿಸುವಂತೆ ಹಾಗೂ ನಾಗರಿಕರಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ನೋಡಿಕೊಳ್ಳುವ ಸಂಬಂಧ ಸನ್ನದ್ಧರಾಗಿರುವಂತೆ, ಈ ಪತ್ರದಲ್ಲಿ ಗೃಹ ಸಚಿವಾಲಯ ನಿರ್ದೇಶಿಸಿದೆ.

<><><>

**ದೇಶದ ಸುದ್ದಿ ವಾಹಿನಿಗಳು, ಡಿಜಿಟಲ್ ವೇದಿಕೆಗಳು** ಮತ್ತು ವ್ಯಕ್ತಿಗಳು, ರಕ್ಷಣಾ ಕಾರ್ಯಾಚರಣೆ ಮತ್ತು ಭದ್ರತಾ ಪಡೆಗಳ ಚಲನವಲನಗಳ, ನೇರ ಪ್ರಸಾರ ವರದಿ ಮಾಡದಂತೆ, ರಕ್ಷಣಾ ಸಚಿವಾಲಯ ನಿರ್ದೇಶಿಸಿದೆ. ಕೇಬಲ್ ಟೆಲಿವಿ ‘ನ್ ನೆಟ್‌ವರ್ಕ್‌ಗಳ ತಿದ್ದುಪಡಿ ಕಾಯ್ದೆ ಅನ್ವಯ, ಭಯೋತ್ಪಾದನಾ ವಿರೋಧಿ ಕಾರ್ಯಾಚರಣೆಗಳ ಕುರಿತು, ನಿಗದಿತ ಅಧಿಕಾರಿಗಳು ಅಧಿಕೃತವಾಗಿ ನೀಡುವ ಮಾಹಿತಿಯನ್ನು ಮಾತ್ರ, ಮಾಧ್ಯಮಗಳು ಪ್ರಸಾರ ಮಾಡಬೇಕು. ಸೂಕ್ಷ್ಮ ಪರಿಸ್ಥಿತಿಯ ಹಿನ್ನೆಲೆ, ದೇಶದ ಸಾರ್ವಭೌಮತ್ವಕ್ಕೆ ಧಕ್ಕೆಯಾಗದ ರೀತಿಯಲ್ಲಿ, ಸಂವೇದನಾಶೀಲರಾಗಿ ಮಾಧ್ಯಮಗಳು ವರ್ತಿಸಬೇಕೆಂದು, ರಕ್ಷಣಾ ಸಚಿವಾಲಯ ಆದೇಶಿಸಿದೆ.

<><><>

**ದೇಶದ ಹಲವು ರಾಜ್ಯಗಳ ಅಧಿಕಾರಿಗಳಿಗೆ,** ಮೈಸೂರು ಆಡಳಿತ ತರಬೇತಿ ಸಂಸ್ಥೆ, ತರಬೇತಿ ನೀಡುತ್ತಿರುವುದು, ರಾಜ್ಯಕ್ಕೆ ಹೆಮ್ಮೆಯ ವಿ ‘ಯ ಎಂದು, ರಾಜ್ಯ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಹೇಳಿದ್ದಾರೆ. ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯಲ್ಲಿ, 12ನೇ ತಾರೀಖಿನ ವರೆಗೆ, 2024ನೇ ತಂಡದ, ತ್ರಿಪುರಾ ರಾಜ್ಯದ, ಆಡಳಿತ ಸೇವೆಯ, 'ಎ' ವೃಂದದ, ಒಟ್ಟು 30 ಅಧಿಕಾರಿಗಳಿಗೆ ಆಯೋಜಿತ, ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ರಾಜ್ಯದ ಇ–ಆಡಳಿತ ಇಲಾಖೆ ಅನುಷ್ಠಾನಗೊಳಿಸಿರುವ, good governance, citizen centric, e-governance initiatives, 'ಭೂಮಿ', 'ಮೋಜಣಿ', 'ಸೇವಾಸಿಂಧು', 'ಏಕೀಕೃತ ಭೂ ನಿರ್ವಹಣಾ ವ್ಯವಸ್ಥೆ' ಹಾಗೂ 'ಕೂಸಿನ ಮನೆ' ಇತ್ಯಾದಿ, ಯಶಸ್ವಿ ಯೋಜನೆಗಳ ಕುರಿತು, ತರಬೇತಿ ನೀಡಲಾಗುತ್ತದೆ, ಎಂದರು.

<><><>

**ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್,** ಏಕ ಸದಸ್ಯ ವಿಚಾರಣಾ ಆಯೋಗದ ಶಿಫಾರಸಿನ ಮೇರೆಗೆ, ಪರಿಶಿ ್ಟ ಜಾತಿಗಳ ಸಮಗ್ರ ಸಮೀಕ್ಷೆ ರಾಜ್ಯಾದ್ಯಂತ ನಡೆಯುತ್ತಿದೆ. ಮೊದಲ ಹಂತದಲ್ಲಿ, ಮನೆ ಮನೆ ಸಮೀಕ್ಷೆ, ಈ ತಿಂಗಳ 17ರ ತನಕ ನಡೆಯಲಿದೆ. ಕಳೆದ 7ನೇ ತಾರೀಖು, 1 ಲಕ್ಷ 86 ಸಾವಿರದ 800 ಜನರ ಸಮೀಕ್ಷೆ ಮಾಡಲಾಗಿದೆ. 65 ಸಾವಿರ ಶಿಕ್ಷಕರು ಸಮೀಕ್ಷೆಯಲ್ಲಿ ಭಾಗವಹಿಸಿದ್ದಾರೆ.

<><><>

**ಬೆಂಗಳೂರಿನ ಬಿ.ಆರ್.ಅಂಬೇಡ್ಕರ್** ಸಂಶೋಧನಾ ಸಂಸ್ಥೆಯ ನಿರ್ದೇಶಕರು, ಪರಿಶಿ ್ಟ ಜಾತಿಗೆ ಸೇರಿದ ಬಂಧುಗಳು, ತಪ್ಪದೇ ತಮ್ಮ ಉಪ ಜಾತಿಗಳನ್ನು ಸರಿಯಾಗಿ ನಮೂದಿಸುವಂತೆ ಮನವಿ ಮಾಡಿದ್ದಾರೆ.

<><><>

**ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ** ಅಧಿಕಾರಿಗಳು, ನಿರಂತರವಾಗಿ ಆಸ್ಪತ್ರೆ, ಅಂಗಡಿ, ಆಹಾರ ಉಗ್ರಾಣಗಳಿಗೆ ಭೇಟಿ ನೀಡಿ, ಉತ್ತಮ ಗುಣಮಟ್ಟ, ಸ್ವಚ್ಛತೆ ಹೊಂದಿರುವುದನ್ನು ಪರಿಶೀಲಿಸುವಂತೆ, ರಾಜ್ಯ ಆಹಾರ ಆಯೋಗದ ಅಧ್ಯಕ್ಷ ಎಚ್.ಕೃಷ್ಣ ಸೂಚಿಸಿದ್ದಾರೆ. 6 ರಿಂದ 9ನೇ ತಾರೀಖಿನ ವರೆಗೆ, ಧಾರವಾಡ ಜಿಲ್ಲೆಯಲ್ಲಿ, ಆಹಾರ ಆಯೋಗ ಪರಿಶೀಲನೆ ನಡೆಸಿದ ಬಳಿಕ, ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ, ಅವಲೋಕನ ಸಭೆ ನಡೆಸಿತು. ಜಿಲ್ಲೆಯಲ್ಲಿರುವ ಆಹಾರ ನಿಗಮದ ಉಗ್ರಾಣಗಳು ಸುರಕ್ಷಿತವಾಗಿಲ್ಲ. ಸ್ವಚ್ಛತೆ, ತಾಂತ್ರಿಕತೆ ಕೊರತೆ ಇದೆ. ಅಧಿಕಾರಿಗಳು ಕೂಡಲೇ ಗಮನ ಹರಿಸಬೇಕೆಂದು, ಎಚ್.ಕೃಷ್ಣ ನಿರ್ದೇಶಿದರು.

<><><>

**ವಿಜಯನಗರ ಜಿಲ್ಲೆ, ಹಗರಿಬೊಮ್ಮನಹಳ್ಳಿ** ತಾಲೂಕು, ಅಂಕಸಮುದ್ರ ಪಕ್ಷಿಧಾಮದಲ್ಲಿ, ಪ್ರಥಮ ಬಾರಿಗೆ, 25 ಫುಲ್ವಸ್ ವಿಸಿಲಿಂಗ್ ಡಕ್ ಕಾಣಿಸಿಕೊಂಡಿವೆ. ಉತ್ತರ ಭಾರತ, ಮೆಕ್ಸಿಕೊ, ವೆಸ್ಟ್ ಇಂಡೀಸ್ ಸೇರಿ, ವಿಶ್ವದ ಉಷ್ಣವಲಯ ಪ್ರದೇಶಗಳಲ್ಲಿ ಮಾತ್ರ ಕಾಣಸಿಗುವ, ಫುಲ್ವಸ್ ಶಿಳ್ಳೆ ಬಾತುಕೋಳಿಗಳನ್ನು, ಅಂಕಸಮುದ್ರ ಪಕ್ಷಿಧಾಮದಲ್ಲಿ ಪಕ್ಷಿಪ್ರೇಮಿಗಳಾದ ವಿಜಯ ಇಟಗಿ ಹಾಗೂ ವಿನೋದ ತಮ್ಮ ಕ್ಯಾಮೆರಾ ಕಣ್ಣಲ್ಲಿ ಸೆರೆ ಹಿಡಿದಿದ್ದಾರೆ. ಫೆಸೆಂಟ್ ಟೇಲ್ಡ್ ಜಕಾನಾ ಹಾಗೂ ಬ್ರಾಂಜ್ ವಿಂಗ್ಡ್ ಜಕಾನಾ ಜೊತೆ, ಫುಲ್ವಸ್ ವಿಸಿಲಿಂಗ್ ಡಕ್, ಸಂತಾನೋತ್ಪತ್ತಿ ಸಾಧ್ಯತೆ ಗುರುತಿಸಲಾಗಿದೆ.

ಪ್ರದೇಶ ಸಮಾಚಾರಕ್ಕಾಗಿ, ಈ ಕುರಿತು ಮಾಹಿತಿ ನೀಡಿದ್ದಾರೆ, ವಿಜಯನಗರದ ಪಕ್ಷಿ ಮಿತ್ರ ವಿಜಯ ಇಟಗಿ.

<><><>

**ಪಶ್ಚಿಮಘಟ್ಟ ವ್ಯಾಪ್ತಿಯ, ಗ್ರಾಮ ಭೂಮಿ ಸಂರಕ್ಷಣೆಗಾಗಿ,** ಪಾರಂಪರಿಕ ಬೆಟ್ಟ, ಕಾನು, ದೇವರ ಕಾಡು, ಗೋಮಾಳ ಸೇರಿದಂತೆ, ಜೀವವೈವಿಧ್ಯದ ಉಳಿವಿಗಾಗಿ, ಮಲೆನಾಡಿನ ರೈತರ, ಸಾಮೂಹಿಕ ನೈಸರ್ಗಿಕ ಸಂಪತ್ತಿನ ಸೊಪ್ಪಿನ ಬೆಟ್ಟ, ಸುಸ್ಥಿರ ಅಭಿವೃದ್ಧಿ ಅಭಿಯಾನ ಆಯೋಜಿಸಲು, ಸಮಾಲೋಚನಾ ಸಭೆ ತೀರ್ಮಾನಿಸಿದೆ. ಉತ್ತರಕನ್ನಡ ಜಿಲ್ಲೆ, ಯಲ್ಲಾಪುರದ ಟಿ.ಎಂ.ಎಸ್ ಸಭಾಂಗಣದಲ್ಲಿ, ಅಡಕೆ, ಸಾಂಬಾರು ಬೆಳೆಗಾರರ ಸಂಘ, ಕದಂಬ ಸಾವಯವ ಸಂಸ್ಥೆ, ಸಾವಯವ ರೈತ ಒಕ್ಕೂಟಗಳ ಸಂಯುಕ್ತ ಆಶ್ರಯದಲ್ಲಿ ಪೂರ್ವಭಾವಿ ಸಭೆ ಜರುಗಿತು. ಪ್ರದೇಶ ಸಮಾಚಾರಕ್ಕಾಗಿ, ಸೊಪ್ಪಿನಬೆಟ್ಟ ಉಳಿಸಿ ಆಂದೋಲನದ ಕುರಿತು, ಮಾಹಿತಿ ನೀಡಿದ್ದಾರೆ, ವೃಕ್ಷ ಲಕ್ಷ ಆಂದೋಲನದ ಪ್ರಮುಖರಾದ, ನರಸಿಂಹ ಸಾತೊಡ್ಡಿ.

<><><>

**ಉತ್ತರಕನ್ನಡ ಜಿಲ್ಲೆ, ಶಿರಸಿ ತಾಲೂಕು,** ಸೋಂದಾ ಶ್ರೀ ಸ್ವರ್ಣವಲ್ಲಿ ಕೃಷಿ ಪ್ರತಿಷ್ಠಾನ, ಸುಧರ್ಮ ಸಭಾಭವನದಲ್ಲಿ, ಇಂದು ಬೆಳಗ್ಗೆ 10 ಗಂಟೆಗೆ, ಕೃಷಿ ಜಯಂತಿ ಆಯೋಜಿಸಿದೆ. ಎರಡು ದಿನಗಳ ಕಾಲ ಆಯೋಜಿತ ಕೃಷಿ ಜಯಂತಿಯಲ್ಲಿ, ಕೃಷಿ ಉತ್ಪನ್ನಗಳ ಪ್ರದರ್ಶನ, ಸ್ಥಳೀಯ ರೈತರು ಅಭಿವೃದ್ಧಿಪಡಿಸಿದ ಸರಳ ಕೃಷಿ ಯಂತ್ರೋಪಕರಣಗಳ ಪ್ರದರ್ಶನ, ವೈವಿಧ್ಯಮಯ ಗೊಬ್ಬರ, ಸಸ್ಯ ಜನ್ಯ ಕೀಟನಾಶಕಗಳ ಪ್ರದರ್ಶನ ಹಾಗೂ ಕೃಷಿ ಸಂಬಂಧಿ ಪತ್ರಿಕೆಗಳ ಪ್ರದರ್ಶನ ಸೇರಿದಂತೆ, ವಿಶೇಷ ಚರ್ಚಾ ಗೋಷ್ಠಿಗಳು ಜರುಗಲಿವೆ.

<><><>

**ಮಂಗಳೂರು ಸಮೀಪದ,** ಉಳ್ಳಾಲ ಕಡಲ್ಕೊರೆತ ಸಮಸ್ಯೆಗೆ, ಶಾಶ್ವತ ಪರಿಹಾರ ಕಲ್ಪಿಸಲು, 70 ಕೋಟಿ ರೂಪಾಯಿ ವೆಚ್ಚದ ಯೋಜನೆ ಸಿದ್ಧವಾಗಿದೆ ಎಂದು, ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ತಿಳಿಸಿದ್ದಾರೆ. ಮಂಗಳೂರಿನಲ್ಲಿ ಮಾತನಾಡಿದ ಅವರು, ಉಳ್ಳಾಲ ಕಡಲ ತೀರದ ಅಪಾಯಕಾರಿ ಸ್ಥಳಗಳೆಂದು ಗುರುತಿಸಲಾದ, ಕೋಟೆಪುರ, ಮೊಗವೀರ ಪಟ್ಣ, ಕೈಕೋ, ಉಚ್ಚಿಲ ಸೋಮೇಶ್ವರ, ಮೊದಲಾದ ಐದು ಸ್ಥಳಗಳಲ್ಲಿ, ಸಮುದ್ರ ಗೋಡೆ ರಕ್ಷಣಾ ಕಾಮಗಾರಿ ಆರಂಭವಾಗಲಿದೆ, ಎಂದರು. ಕಡಲ್ಕೊರೆತದ ತಡೆಗೋಡೆಗಳ ರಕ್ಷಣಾ ಕಾರ್ಯದ ನಿರ್ವಹಣೆಗೆ, ವಾರ್ಷಿಕ 25 ಕೋಟಿ ರೂಪಾಯಿಗಳ ಅನುದಾನ ನಿಗದಿಪಡಿಸಲಾಗಿದೆ.

<><><>

**ನಾಗರಿಕರ ಭದ್ರತೆ, ಪ್ರಯಾಣಿಕರ ಸುಗಮ ಪ್ರಯಾಣ** ಹಾಗೂ ಕೊನೆ ಕ್ಷಣದ ಅನನುಕೂಲತೆ ತಪ್ಪಿಸಲು, ವಿಮಾನಯಾನ ನಿರ್ಗಮನಕ್ಕೆ, ಕನಿಷ್ಟ ಎರಡು ಗಂಟೆಗಳ ಮೊದಲು, ವಿಮಾನ ನಿಲ್ದಾಣವನ್ನು ತಲುಪಲು, ಕಲಬುರಗಿ ವಿಮಾನ ನಿಲ್ದಾಣ ನಿರ್ದೇಶಕ ಮಹೇಶ್, ಮನವಿ ಮಾಡಿದ್ದಾರೆ.

<><><>

**ಶಿವಶರಣೆ ಹೇಮರಡ್ಡಿ ಮಲ್ಲಮ್ಮನವರ** ಜಯಂತ್ಯುತ್ಸವವನ್ನು, ರಾಜ್ಯಾದ್ಯಂತ ಶ್ರದ್ಧಾ, ಭಕ್ತಿಯಿಂದ ಇಂದು ಆಚರಿಸಲಾಗುತ್ತದೆ.

<><><>

**1857ರ ಭಾರತ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ,** ಮೊದಲ ಕಿಡಿ, ಮೀರಟ್‌ನಲ್ಲಿ ಹಾರಿದ ದಿನವಿಂದು. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿ ವಿರುದ್ಧ, ಭಾರತೀಯ ಸ್ವಾತಂತ್ರ್ಯ ಸೇನಾನಿಗಳು, ಸಶಸ್ತ್ರ ಕ್ರಾಂತಿ ನಡೆಸಿದ, ದಿನವಾಗಿ ಸ್ಮರಿಸಲಾಗುತ್ತದೆ.

<><><>

**ಪಹಲ್ಗಾಮ್ ಉಗ್ರಗಾಮಿ ಕೃತ್ಯಕ್ಕೆ** ಪ್ರತ್ಯುತ್ತರವಾಗಿ, ಭಾರತೀಯ ಸೇನೆ ನಡೆಸುತ್ತಿರುವ "ಆಪರೇ ´ನ್ ಸಿಂಧೂರ" ಕಾರ್ಯಾಚರಣೆ ಬೆಂಬಲಿಸಿ, ಬೆಂಗಳೂರಿನಲ್ಲಿ ಮುಖ್ಯಮಂತ್ರಿಯವರ ನೇತೃತ್ವದಲ್ಲಿ, ಜೈ ಹಿಂದ್ ತಿರಂಗಾ ಯಾತ್ರೆ ನಡೆಯಿತು.

<><><>

**ಧಾರವಾಡದ ಎಸ್.ಡಿ.ಎಮ್. ಅಭಿಯಾಂತ್ರಿಕ** ಮಹಾವಿದ್ಯಾಲಯದಲ್ಲಿ, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ, 'ದೇಗುಲಗಳ ವಾಸ್ತುಶಿಲ್ಪ; ನವೀಕರಿಸುವಲ್ಲಿ ಅಭಿಯಾಂತ್ರಿಕ ಆಯಾಮಗಳು' ಕುರಿತ, ಮೂರು ದಿನಗಳ ಕಾರ್ಯಾಗಾರಕ್ಕೆ, ಚಾಲನೆ ದೊರೆತಿದೆ.

<><><>

**8ನೇ ಆವೃತ್ತಿಯ, ಪ್ಲಾಸ್ಟೇಶಿಯಾ ವಸ್ತು ಪ್ರದರ್ಶನ,** ಮೂರು ದಿನಗಳ ಕಾಲ, ಬೆಂಗಳೂರಿನ ಅಂತಾರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದಲ್ಲಿ ಜರುಗಲಿದೆ.

<><><>

**ಶಿವಮೊಗ್ಗದ, ಭದ್ರಾ ಜಲಾಶಯದ** ಬಲದಂಡೆ ಕಾಲುವೆಯಲ್ಲಿ, ಈ ತಿಂಗಳ 18ರ ವರೆಗೆ, ರೈತರ ಬೆಳೆಗಳ ಹಿತದೃಷ್ಟಿಯಿಂದ, ನೀರು ಹರಿಸಲಾಗುತ್ತಿದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಆಪರೇಷನ್ ಸಿಂಧೂರ್; ರಾಜ್ಯದ** ಜನತೆಯ ಸುರಕ್ಷತೆಗೆ ಸೂಕ್ತ ಭದ್ರತೆ ಖಾತ್ರಿ ಪಡಿಸುವಂತೆ, ಕೇಂದ್ರ ಗೃಹ ಸಚಿವಾಲಯದಿಂದ, ಆದೇಶ.
- **ಮೈಸೂರು ಆಡಳಿತ ತರಬೇತಿ ಸಂಸ್ಥೆ;** ದೇಶದ ಹಲವು ರಾಜ್ಯಗಳ ಅಧಿಕಾರಿಗಳಿಗೆ, ಮಾದರಿ ತರಬೇತಿ ಕೇಂದ್ರ.
- **ಪಶ್ಚಿಮ ಘಟ್ಟದ ಸೊಪ್ಪಿನ ಬೆಟ್ಟಗಳ,** ಸುಸ್ಥಿರ ಅಭಿವೃದ್ಧಿಗೆ, ಮಲೆನಾಡಿನ ರೈತರ ಸಮಾಲೋಚನಾ ಸಭೆ, ತೀರ್ಮಾನ.
- **ಉಳ್ಳಾಲ ಕಡಲ್ಕೊರೆತ ಸಮಸ್ಯೆ;** ಶಾಶ್ವತ ಪರಿಹಾರಕ್ಕೆ, 70 ಕೋಟಿ ರೂಪಾಯಿ ಯೋಜನೆ.

<><><>